# ಪತ್ರಿಕಾ ಪ್ರಕಟಣೆ

## ವಿಶ್ವವಿದ್ಯಾಲಯ ಪೊಲೀಸ ಠಾಣೆ ಗುನ್ನೆ ನಂ 62/2021 ಕಲಂ 302,201 ಐ.ಪಿ.ಸಿ ಪ್ರಕರಣದಲ್ಲಿ ಕೊಲೆಗಾರರ ಬ+ಂಧನ.

* * * * *

ಕಲಬುರಗಿ ವಿಶ್ವ ವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ಕಲಬುರಗಿ ನಗರದ ಶಹಾಬಾದ ರಸ್ತೆಯ ಆಶೋಕ ಹೊನ್ನಳ್ಳಿ ರವರ ಹೊಲದ ರಸ್ತೆಯ ಬದಿಯಲ್ಲಿ ದಿನಾಂಕ 07.04.2021 ರಂದು ಯಾರೋ ದುಸ್ಕರ್ಮಿಗಳು ಕಶೆಪ್ಪ ತಂದೆ ಅಮಲ್ಲಪ್ಪ ಸಗರ ಈತನಿಗೆ ಹೊಡೆದು ಕೊಲೆ ಮಾಡಿ ಪರಾರಿಯಿದ್ದ ಆರೋಪಿತರ ಪತ್ತೆಗಾಗಿ, ಬಲೆ ಬೀಸಿ, ಆರೋಪಿತರು ಇರುವ ಬಗ್ಗೆ ಖಚಿತ ಭಾತ್ಮಿ ಮೇರೆಗೆ, ಕಲಬುರಗಿ ನಗರದ ಪೊಲೀಸ ಆಯುಕ್ತರಾದ ಶ್ರೀ ವೈ.ಎಸ್. ರವಿಕುಮಾರ ಐಪಿಎಸ್, ಉಪ ಪೊಲೀಸ್ ಆಯುಕ್ತರಾದ ಶ್ರೀ ಅಡ್ಡೂರು ಶ್ರೀನಿವಾಸಲು ಐ.ಪಿ.ಎಸ್, ಉಪ ಪೊಲೀಸ್ ಆಯುಕ್ತರಾದ ಶ್ರೀ ಶ್ರೀಕಾಂತ ಕಟ್ಟಿಮನಿ ಕೆ.ಎಸ್.ಪಿ.ಎಸ್ ರವರ ಮತ್ತು "ಸಿ" ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀ ಜೆ.ಹೆಚ್ ಇನಾಮದಾರ್ ರವರ ಮಾರ್ಗದರ್ಶನದಲ್ಲಿ ವಿಶ್ವ ವಿದ್ಯಾಲಯ ಪೊಲೀಸ್ ಠಾಣೆಯ ಇನ್ಸಪೆಕ್ಟರ್‌ರವರಾದ ಶ್ರೀ ಶಿವಾನಂದ ಘಾಣಗೇರ್, ಹಾಗೂ ಸಿಬ್ಬಂದಿ ಜನರಾದ ರಾಜು ಟಾಕಳೆ, ಅರವಿಂದ, ಸುಲ್ತಾನ, ಶಶಿಕಾಂತ, ಪ್ರೀತಮ್ ರವರು ಆರೋಪಿತರಾದ 1) ಯಲ್ಲಪ್ಪ ತಂದೆ ಹಣಮಂತ ದೊಕ್ಕಾ ವಯ: 33 ವರ್ಷ, ಉ: ಸಾಬೂನ್ ಮಾರುವುದು, ಜಾತಿ: ಬುಡಗ ಜಂಗಮ, ಸಾ: ಯರಗೋಳ ತಾ:ಚಿತ್ತಾಪೂರ ಜಿ: ಕಲಬುರಗಿ, ಹಾವ: ಬುಡಗ ಜಂಗಮ ಕಾಲೋನಿ ಶಹಾಬಾದ ರೋಡ ರಾಜಾಪೂರ ಕಲಬುರಗಿ, 2) ರಮೇಶ ತಂದೆ ಬಸವರಾಜ ಸಿರವಾಟಿ, ವಯ: 28 ವರ್ಷ, ಉ: ಕೂಲಿ ಕೆಲಸ ಮತ್ತು ಕೊಡ ಮಾರುವುದು, ಜಾತಿ: ಬುಡಗ ಜಂಗಮ, ಸಾ: ಬಿದರ ಗಡ್ಡಿ ಚಿತ್ತಾಪೂರ ಜಿ: ಕಲಬುರಗಿ, ಹಾವ: ಬುಡಗ ಜಂಗಮ ಕಾಲೋನಿ ಶಹಾಬಾದ ರೋಡ ರಾಜಾಪೂರ ಕಲಬುರಗಿ ರವರನ್ನು ಹಿಡಿದು ಅವರಿಂದ ಒಂದು ಗುಂಡು ಕಲ್ಲು ಜಪ್ತ ಮಾಡಿಕೊಂಡಿದ್ದು ಇರುತ್ತದೆ. ಸದರಿ ಆರೋಪಿತರು ಮೃತನ ಹತ್ತಿರ ಹಣದ ವಿಷಯವಾಗಿ ಕೊಲೆ ಮಾಡಿದ ಬಗ್ಗೆ ವಿಚಾರಣೆ ಕಾಲಕ್ಕೆ ಬೆಳಕಿಗೆ ಬಂದಿರುತ್ತದೆ. ಸದರ ಆರೋಪಿತರಿಗೆ ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಇರುತ್ತದೆ.

ಸದರಿ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶ್ವಸಿಯಾದ ಕಲಬುರಗಿ ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ರವರು ಮತ್ತು ಮಾನ್ಯ ಡಿ.ಸಿ.ಪಿ. (ಕಾ.ಸು.), ಕಲಬುರಗಿ ನಗರ ಹಾಗೂ ಡಿ.ಸಿ.ಪಿ. (ಅ.ಸಂ.), ರವರು ಮೆಚ್ಚುಗೆ ವ್ಯಕ್ತಪಡಿಸಿದ್ದು ಇರುತ್ತದೆ. ಇನ್ನ ಇಬ್ಬರು ಆರೋಪಿತರಾದ ಯಶವಚಿತ್ರಾಯ ಮತ್ತು ಈಶ್ವರ ಇವರು ಪರಾರಿ ಇದ್ದು ಇವರ ಪತ್ತೆಗಾಗಿ ಪೊಲೀಸರು ಬಲೆ ಬಿಸಿದ್ದು ಇರುತ್ತದೆ.

Scanned with CamScanner